ಹೇಳತಕ್ಕಂಥದ್ದು ಯೋಗ್ಯವಾದಂಥ ನಿಲುವು ಆಗಿರುತ್ತದೆ. ಅದನ್ನು ನಾವು ಸಂಪೂರ್ಣವಾಗಿ ಸ್ವಾಗತಮಾಡುತ್ತೇವೆ. ನಾವು ಇಲ್ಲಿಗೆ ಬಂದಾಗ ಹೊರಗಡೆಯೋಗಿ ಮಾತನಾಡಬೇಕಾಗುತ್ತದೆ. ಹಾಗೆ ಮಾತನಾಡಬೇಕಾದರೆ ಪರಾಂಡದಲ್ಲಿ ನಿಂತು ಮಾತನಾಡಬೇಕು. ಆದ್ದರಿಂದ ಈಗ ತಾವು ಎಲ್ಲರೂ ಬಂದು ಸೆಂಟ್ರಲ್‌ಹಾಲ್ ಮಾಡಬೇಕು. ಆ ವ್ಯವಸ್ಥೆ ಜಾರಿಗೆ ಬರುತ್ತದೆಂದು ತಾವು ಹೇಳಿದಿರಿ. ಅದು ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಈಗ ನಾವು ಯಾರೊಬ್ಬರೊಡನೆ ಮಾತನಾಡಬೇಕಾದರೆ ಅವಕಾಶವಿಲ್ಲದಿರುವುದರಿಂದ ತತ್‌ಕ್ಷಣ ಕೆಲವು ಕೋಣೆಗಳನ್ನಾದರೂ ಅಧಿಕೃತವಾಗಿ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಇರತಕ್ಕಂಥ ಪಕ್ಷಗಳಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಅಧಿಕೃತ ವಿರೋಧಪಕ್ಷಗಳಿಗೆ ಕಛೇರಿಯನ್ನು ಒದಗಿಸತಕ್ಕಂಥದ್ದು ಮತ್ತೆ ಕಾನ್‌ಸ್ಟಿಟ್ಯೂಷನಲ್ ಕ್ಲಬ್ ಇನ್ನಿತರ ವಿಚಾರಗಳಲ್ಲಿ ಮಾತು ಕತೆ ನಾವು ಮಾಡಿದ್ದೇನೆ. ಆದರೆ ಕೆಲವು ಮಾಡಿಲಿಕ್ಕೆ ಬಾಕಿ ಇದೆ. ಅದನ್ನು ನಾನು ಒಪ್ಪುತ್ತೇನೆ. ಅದನ್ನು ಮಾಡುವಾಗ ತಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿ ಆದಷ್ಟು ಬೇಗ ಅದಕ್ಕೆ ವಿಶೇಷವಾದ ವ್ಯವಸ್ಥೆಯನ್ನು ಮಾಡುತ್ತೇನೆ. ಮತ್ತು ಕಾನ್‌ಸ್ಟಿಟ್ಯೂಷನ್ ಕ್ಲಬ್ ಬಗ್ಗೆ ನಿರ್ಣಯವಾಗಿದೆ ಎಂದು ಹೇಳುತ್ತೀರಿ, ಅದು ನನಗೆ ನೆನಪಿಲ್ಲ. ಆದರೆ ಕಾನ್‌ಸ್ಟಿಟ್ಯೂಷನ್ ಕ್ಲಬ್ ಬಾಲಬ್ರೂಯಿಯಲ್ಲಿ ಮಾಡಬೇಕೆಂದು ಪೇಳಿ ಸಲಹೆ ಮಾಡತಕ್ಕಂಥ ಸಂದರ್ಭದಲ್ಲಿ ನಾನು ಹಾಜರಿದ್ದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ ತಮ್ಮ ಪಾರ್ಟಿ ಆದರೆ ನಿರ್ಣಯಕ್ಕೆ ಪಾರ್ಟಿ ಎಂದು ಅಲ್ಲ.

ಶ್ರೀ ಎಂ. ವಿ. ವೆಂಕಟಪ್ಪ : ತಾವು ಇದ್ದಿರಿ.

ಶ್ರೀ ಎಂ.ವೀರಪ್ಪಮೊಯಿಲಿ : ಈ ಸದನದಲ್ಲಿ ನಾವು ಇದರ ಬಗ್ಗೆ ವ್ಯವಸ್ಥೆ ಮಾಡಲಿಕ್ಕೆ ತಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇವೆ. ಬಹುಶಃ ಈ ಸದನ ಮುಗಿಯುವದರೊಳಗೆ ಈ ವ್ಯವಸ್ಥೆಯನ್ನು ಮಾಡುತ್ತೇವೆ. ಇನ್ನು ಸೆಂಟ್ರಲ್ ಹಾಲ್ ಬಗ್ಗೆ ಪೇಳಲೇಬೇಕಾದರೆ ತಾವು ಸೂಚನೆಯನ್ನು ಕೊಟ್ಟಿದ್ದೀರಿ, ಇದರ ಬಗ್ಗೆಯೂ ಕೂಡ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಕೇಬಲ್ ದೂರದರ್ಶನ ವಿರುದ್ಧ ಚಿತ್ರೋದ್ಯಮ ಬಂದ್ ಬಗ್ಗೆ ಪ್ರಸ್ತಾಪ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಕೇಬಲ್ ದೂರದರ್ಶನ ಜಾಲ ಬಹಳ ಜಾಸ್ತಿಯಾಗಿರುವುದರಿಂದ ಇಡೀ ರಾಜ್ಯದ ಚಿತ್ರೋದ್ಯಮಕ್ಕೆ ಧಕ್ಕೆಯುಂಟಾಗಿದೆ. ಇದನ್ನು ಪ್ರತಿಭಟಿಸಬೇಕಾಗಿದೆ. ಇಡೀ ರಾಜ್ಯಾದ್ಯಂಥ ಸಮಗ್ರ ಚಿತ್ರೋದ್ಯಮ ಬಂದ್ ಆಗಿದೆ. ಇವಕ್ಕೆ ಸರ್ಕಾರದವರು ಕಾನೂನನ್ನು ಮಾಡಿ ಈ ಜಾಲವನ್ನು ಸಂಪೂರ್ಣವಾಗಿ ತಪ್ಪಿಸುವುದಕ್ಕೆ ಒಂದು ವಿಧೇಯಕವನ್ನು ತಂದು ವಿವೇಚನೆಯಿಂದ ತೀರ್ಮಾನಕ್ಕೆ ಬರಬೇಕು. ಇದು ಒಂದು ಘೋರ ಅಪರಾಧವಾಗಿದೆ. ಪ್ರತಿ ಮನೆ ಮನೆಗೂ ಇವರೇ ಪ್ರವೇಟ್ ಏಜೆನ್ಸಿ ಎಂದು ಹೇಳಿಕೊಂಡು ಫಿಲಮ್‌ಗಳನ್ನು ಕೊಡುತ್ತಿರುತ್ತಾರೆ. ಕೆಟ್ಟ ಕೆಟ್ಟ ಫಿಲಮ್‌ಗಳನ್ನು ಹಾಕಿ ಇಡಿ ಬೆಂಗಳೂರಿನಲ್ಲಿ ಒಂದೇ ಅಲ್ಲ ಎಲ್ಲಕಡೆ ಬ್ಲೂ ಫಿಲಮ್‌ಗಳನ್ನು ಹಾಕಿ ಸಮಾಜವನ್ನು ಕೆಟ್ಟದಾರಿಗೆ ಎಳೆಯುತ್ತಿದ್ದಾರೆ. ಸರ್ಕಾರದ ಇವರ ಬಗ್ಗೆ ಎಚ್ಚರವನ್ನು ವಹಿಸಬೇಕು. ಕರ್ನಾಟಕದಲ್ಲಿ ಬಹುತೇಕ ಎಲ್ಲಾ ಭಾಗಗಳಲ್ಲಿಯೂ ಕೂಡ ಈ ರೋಗ ಹಬ್ಬಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಒಂದು ಕಾನೂನನ್ನು ಮಾಡಲು ತೀರ್ಮಾನವನ್ನು ಮಾಡಬೇಕೆಂದು ಹೇಳುತ್ತೇನೆ. ಇವತ್ತು ಇಡಿ ರಾಜ್ಯದಲ್ಲಿ ಚಿತ್ರೋದ್ಯಮ ಬಂದಾಗಿದೆ. ಸರ್ಕಾರದವರು ಈ ಬಗ್ಗೆ ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ ಕನ್ನಡ ಚಿತ್ರೋದ್ಯಮಕ್ಕೆ ಬಹಳ ತೊಂದರೆಯಾಗಿದೆ. ಕೋಟ್ಯಾಂತರ ರೂಪಾಯಿಗಳನ್ನು ಇನ್‌ವೆಸ್ಟ್‌ಮಾಡಿರತಕ್ಕಂಥ ಚಿತ್ರೋದ್ಯಮಿಗಳಿಗೆ ಇದರಿಂದ ಬಹಳ ತೊಂದರೆಯಾಗಿದೆ. ಇದನ್ನು ಸರ್ಕಾರದ ಗಮನಕ್ಕೆ ತರಲು ಪ್ರಯತ್ನ ಮಾಡಿದೆವು. ಯಾರೋ ಮಾಡುತ್ತಿರುವಂಥದ್ದನ್ನು ಕೆಲವರು ದುರುಪಯೋಗ ಮಾಡಿಕೊಳ್ಳುವುದು ಸರಿಯಲ್ಲ. ಈ ರೀತಿ ಕೇಬಲ್ ದೂರದರ್ಶನಕ್ಕೆ ಅವಕಾಶವನ್ನು ಮಾಡಿಕೊಡಬಾರದೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

Sri D.B. Chandre Gowda : Various courts including the Supreme Court have held that this Cable T.V. is not illegal as long as the Copyright Act is not violated.This is the judgement.

ಅದನ್ನು ಹೇಳುವುದಕ್ಕೆ ಮುಂಚೆ ಸಮಾಲೋಚನೆ ಮಾಡುವುದು ಒಳ್ಳೆಯದು.

ಶ್ರೀ ಕೆ.ಎಸ್. ಈಶ್ವರಪ್ಪ : ಗ್ರಾಮಾಂತರ ಪ್ರದೇಶದಲ್ಲಿ ಯುವಕರು ಪೂರ್ಣದಾರಿ ತಪ್ಪುತ್ತಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಕೇಬಲ್ ಟಿ.ವಿ. ಜಾಲದ ಹಾವಳಿಯ ವಿರುದ್ಧ ಇವತ್ತು ಚಿತ್ರೋದ್ಯಮದ ಬಂದ್‌ಗೆ ಕರೆ ಕೊಟ್ಟಿದ್ದಾರೆ. ಅದು ಸರ್ಕಾರದ ಗಮನದಲ್ಲಿದೆ. ಇದು ರಾಜ್ಯಕ್ಕೆ ಮಾತ್ರ ಸೀಮಿತವಾದ ಪ್ರಶ್ನೆ ಅಲ್ಲ. ಡೆಲ್ಲಿಯಲ್ಲಿ ಇನ್‌ಫಾರ್ಮೇಶನ್ ಮಿನಿಸ್ಟರ್ಸ್ ಕಾನ್‌ಫರೆನ್ಸ್ ಆದಾಗ ನಾನು ಈ ವಿಚಾರವನ್ನು ಕೇಂದ್ರ ಸರಕಾರದ ಗಮನಕ್ಕೆ ಕೂಡ ತಂದಿದ್ದೇನೆ. ಟೆಲಿಕಮ್ಯುನಿಕೇಷನ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಸುಪ್ರೀಂ ಕೋರ್ಟ್ ತೀರ್ಪು ಕೂಡ ಕೊಟ್ಟಿದೆ. ರಾಜ್ಯ ಸರ್ಕಾರದವರು ವಿಡಿಯೋ ಟಿ.ವಿ. ಜಾಲದ ಬಗ್ಗೆ ಕಾನೂನು ಮಾಡುವುದಕ್ಕೆ ಬರುತ್ತದೆ. ಆದರೆ ಸಮಗ್ರವಾಗಿ ಮಾಡಬೇಕಾದರೆ ಕೇಂದ್ರ ಸರ್ಕಾರ ಇದರ ಬಗ್ಗೆ ಕಾನೂನು ಮಾಡಬೇಕಾದ ಅವಶ್ಯಕತೆ ಇದೆ ಎಂದು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದ್ದೇವೆ. ರಾಜ್ಯ ಸರ್ಕಾರದಲ್ಲಿ ಏನು ಮಾಡಲಿಕ್ಕೆ ಸಾಧ್ಯವಿದೆ. ಎಂಬುದರ ಬಗ್ಗೆ ಸಮಾಲೋಚನೆ ಮಾಡಿ ಚಿತ್ರೋದ್ಯಮಕ್ಕೆ ಸಂಬಂಧಪಟ್ಟವರ ಜೊತೆಯಲ್ಲಿ 3-4 ಗಂಟೆಗಳ ಕಾಲ ಚರ್ಚೆ ಮಾಡಿ ಅವರ ಸಮಸ್ಯೆ ಏನಿದೆ ಎಂದು ಕೆಲವು ತಿಂಗಳ ಹಿಂದೆಯೇ ತಿಳಿದುಕೊಂಡ್ದಿದ್ದೇವೆ. ಈ ವಿಚಾರ ರಾಜ್ಯ ಸರ್ಕಾರದ ಗಮನದಲ್ಲಿದೆ. ಈ ಬಗ್ಗೆ ತೀವ್ರವಾಗಿ ಕಾನೂನು ಏತಕ್ಕೆ ತರಬಾರದೆಂದು ಪರಿಶೀಲನೆ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರಕ್ಕ ಕೂಡ ಒತ್ತಾಯಿಸಿದ್ದೇವೆ. ಪುನಃ ಇದರ ಬಗ್ಗೆ ನೆನಪು ಮಾಡತಕ್ಕ ಕೆಲಸ ಮಾಡುತ್ತೇವೆ.

Sri D.B. Chandre Gowda : Yesterday it was agreed. On the same subject.

ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದವು. ಇದರಲ್ಲಿ ನಮ್ಮ ಹೆಸರನ್ನು ಸೇರಿಸಬೇಕು.

ನಿಲುವಳಿ ಸೂಚನೆ ಗಮನ ಸೆಳೆಯುವ ಸೂಚನೆಯಾಗಿ ಬಂದಿದೆ. ಆದರೆ ನಿಲುವಳಿ ಸೂಚನೆ ಕೊಟ್ಟವರ ಹೆಸರು ಇದರಲ್ಲಿ ಇಲ್ಲ. ಆದ್ದರಿಂದ ಇದರಲ್ಲಿ ನಮ್ಮ ಹೆಸರನ್ನು ಸೇರಿಸಿ, ಇಲ್ಲದಿದ್ದರೆ, ನಿಲುವಳಿ ಸೂಚನೆ ವಿನಾಯಿತೆಂದು ಕೇಳಬೇಕಾಗುತ್ತದೆ.

ಅಧ್ಯಕ್ಷರು : ನಿಲುವಳಿ ಸೂಚನೆಯನ್ನು ರಿಜೆಕ್ಟ್ ಮಾಡಲಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ಅದು ಗಮನ ಸೆಳೆಯುವ ಸೂಚನೆಯಾಗಿ ಬಂದಿರುವುದರಿಂದ ನಮಗೆ ಕೂಡ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಈ ಸದನಕ್ಕೆ ಸಿಲ್ವರ್ ಜ್ಯೂಬಿಲಿ ಪಾರ್ಕ್ ಬಗ್ಗೆ ಹೇಳಿಕೆ ಕೊಡಿಸುತ್ತೇನೆಂದರೆ ಹೇಳಿದ್ದಿರಿ.

ಅಧ್ಯಕ್ಷರು : ಅದು ಗಮನ ಸೆಳೆಯುವ ಸೂಚನೆಯ ರೂಪದಲ್ಲಿ ನಾಳೆ ಬರುತ್ತದೆ. ಮಾನ್ಯ ಸಹಕಾರ ಸಚಿವರು ತಮಗೆ ಸಂಬಂಧಪಟ್ಟ ಗಮನ ಸೆಳೆಯುವ ಸೂಚನೆಯನ್ನು ಇಂದು ಸಂಜೆ 5 ಗಂಟೆಗೆ ತೆಗೆದುಕೊಳ್ಳುವುದಕ್ಕೆ ಅಭ್ಯಂತರ ಇಲ್ಲ ತಾನೆ?

ಶ್ರೀ ಕೆ.ಹೆಚ್. ಪಾಟೀಲ್ ಇಲ್ಲ.

ಗಮನ ಸೆಳೆಯುವ ಸೂಚನೆಗಳು

ಕರ್ನಾಟಕ ಕೇರಳ ಗಡಿಯಲ್ಲಿರುವ ಮೂಲೆ ಹೊಳೆ ಅಭಯಾರಣ್ಯ ಸಮೀಪದ ಸುಮಾರು 500 ಎಕರೆ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದು ಲಕ್ಷಾಂತರ ರೂಪಾಯಿ ನಷ್ಟವಾಗಿರುವುದರ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ : (ವಿರೋಧ ಪಕ್ಷದ ನಾಯಕರು) :

ಮಾನ್ಯ ಅಧ್ಯಕ್ಷರೆ, ಕರ್ನಾಟಕ - ಕೇರಳ ಗಡಿಯಲ್ಲಿರುವ ಮೂಲೆ ಹೊಳೆ ಅಭಯಾರಣ್ಯ ಸಮೀಪದ ಸುಮಾರು 500 ಎಕರೆ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದು ಲಕ್ಷಾಂತರ ರೂಪಾಯಿ ನಷ್ಟವಾಗಿರುವುದರ ಬಗ್ಗೆ ಮಾನ್ಯ ಅರಣ್ಯ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

(ಮಾನ್ಯ ಅರಣ್ಯ ಖಾತೆ ರಾಜ್ಯ ಮಂತ್ರಿಯವರು ಸದನದಲ್ಲಿ ಒದಗಿಸಿದ್ದ ಹೇಳಿಕೆ ಬಿಟ್ಟು ಬೇರೊಂದು ಹೇಳಿಕೆಯನ್ನು ಓದಲು ಪ್ರಾರಂಭಿಸಿದರು)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನಮಗೆ ಕೊಟ್ಟಿರುವುದೇ ಒಂದು. ಅವರು ಓದುತ್ತಾ ಇರುವುದೇ ಒಂದು. ನಮಗೆ ಒಂದು ಹೇಳಿಕೆ ಬಂದಿದೆ. ಅವರು ಯಾವುದೂ ಒದುತ್ತಿದ್ದಾರೋ ಅರ್ಥವಾಗುತ್ತಿಲ್ಲ. ನಮಗೆ ಕೊಟ್ಟಿರುವುದು ಏಳೂವರೆ ಸಾಲಿದ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಏಳೂವರೆ ಸಾಲಿನ ಉತ್ತರ ಇದೆ. ಆದರೆ 500 ಎಕರೆ ಕಾಡು ಸುಟ್ಟಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್ : ನೀವು ಕೊಟ್ಟಿರುವುದು ನಮ್ಮ ಹತ್ತಿರ ಇದೆ.

ಶ್ರೀ ಇ.ಟಿ. ಶಂಭುನಾಥ್ : ನಿಮಗೆ ಕೊಟ್ಟಿರುವುದೇ ಓದುತ್ತೇನೆ.

ಶ್ರೀ ಸಿ.ಬೈರೇಗೌಡ : ಹಾಗಲ್ಲ, ಅವರು ಏನು ಓದುತ್ತಿದ್ದಾರೋ ಆ ಹೇಳಿಕೆಯ ಕಾಪಿ ನಮಗೆ ಕೊಡಬೇಕು. ಅದನ್ನೇ ಓದುತ್ತೇನೆ ಎಂದರೆ ಅರ್ಥ ಏನು? It cannot be.

MR. SPEAKER : I will not permit him to read a statement other than which has been furnished to me. He has to confine himself to the statement which he has furnished to me.

SRI C.BYRE GOWDA : There are two statements.

MR. SPEAKER : There cannot be two statements. There has to be only one statement.

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಬಂಡೀಪುರ ಅಭಯಾರಣ್ಯ ವ್ಯಾಪ್ತಿಯಲ್ಲಿ ಬರುವ ಮೂಲೆ ಹೊಳೆ ಮನ್ನಾ ಜಂಗಲಿಯಲ್ಲಿ ಸುಮಾರು 500 ಎಕರೆ ಪ್ರದೇಶದಲ್ಲಿ ಬೆಂಕಿ ಹಚ್ಚಿದ್ದು. ಬೆಂಕಿಯ ಬಹುಭಾಗ ದಟ್ಟವಾಗಿ ಬೆಳೆದ ಹುಲ್ಲುಗಾವಲನ್ನು ಆಹುತಿ ತೆಗೆದುಕೊಂಡಿರುತ್ತದೆ. ಮರ